

ಹೊಸದೊಂದು ದೃಷ್ಟಿಕೋನವಂತೂ ಸಿಕ್ಕಿದೆ. ಇದುವರೆಗೆ ನಮಗೆಲ್ಲ ಮನೆಯಲ್ಲಿ ಅಡುಗೆ ಮಾಡಿಕೊಂಡಿರುವ ಅಮ್ಮನ ಕೆಲಸ ಮಹತ್ವದ್ದು ಎಂದು ಎಂದೂ ಅನಿಸಿರಲೇ ಇಲ್ಲ. ಆದರೆ ಈ ಕಾಲದಲ್ಲಿ ಅದೇ ಎಷ್ಟು ಮುಖ್ಯವಾದದ್ದು ಎಂದು ತಿಳಿದುಕೊಂಡಿದ್ದೇವೆ. ಮನುಷ್ಯನ ಬದುಕಿನ ಅತ್ಯಗತ್ಯ ಮತ್ತು ಅನಿವಾರ್ಯವಾದ ಸಂಗತಿಗಳು ಏನು ಎಂಬುದನ್ನು ಕೊರೊನಾ ನಮಗೆ ಕಾಣಿಸಿದೆ. ಆ ಮಿತಿಯನ್ನು ಮೀರಿದರೆ ಏನಾಗುತ್ತದೆ ಎಂಬುದನ್ನೂ ತೋರಿಸಿದೆ' ಎನ್ನುವ ರಿಷಿ, 'ಮಂಗಳನ ಕಡೆಗೆ ರಾಕೆಟ್ ಉಡಾಯಿಸುವುದು ಎಷ್ಟು ಮುಖ್ಯವೋ, ನಮ್ಮ ಸುತ್ತಮುತ್ತಲಿನ ಪರಿಸರವನ್ನು ಆರೋಗ್ಯಪೂರ್ಣವಾಗಿ ಇಟ್ಟುಕೊಳ್ಳುವುದೂ ಮುಖ್ಯ. ಅದಕ್ಕಾಗಿ ನಾವು ತಾಳಿಕೆಯ ಬದುಕನ್ನು ಆಯ್ದುಕೊಳ್ಳಬೇಕು' ಎನ್ನುತ್ತಾರೆ.

ಲಾಕ್‌ಡೌನ್ ಸಮಯದಲ್ಲಿಯೇ ರಿಷಿ ಸೋಷಿಯಲ್ ಮೀಡಿಯಾ ಮೂಲಕ ಬೆಂಗಳೂರು ನೀರಿನ ಸಮಸ್ಯೆಯ ಕುರಿತು ಒಂದು ಮಾಹಿತಿಪೂರ್ಣ ವಿಡಿಯೊ ಮಾಡಿ ಹಂಚಿಕೊಂಡಿದ್ದರು. ನೀರಿನ ಸಮಸ್ಯೆಯನ್ನು ಮಳೆಗಾಲದ ನೀರು ಸಂರಕ್ಷಣೆಯ ಮೂಲಕವೇ ಪರಿಹರಿಸಿಕೊಳ್ಳಬಹುದು ಎಂಬುದನ್ನು ಆ ವಿಡಿಯೊ ಸೂಚಿಸಿತ್ತು.

ಈ ರೀತಿಯ ಸಾಮಾಜಿಕ ಕೆಲಸ ಮಾಡುತ್ತಲೂ ಮನೆಯವರ ಜೊತೆಗೆ ಖುಷಿಯ ಸಮಯವನ್ನೂ ಅವರು ಕಳೆದಿದ್ದಾರೆ. ಸಾಕಷ್ಟು ಅಡುಗೆಗಳನ್ನು ಮಾಡಿ, ಹೊಸರುಚಿಗಳನ್ನು ತಯಾರಿಸಿ ಬಡಿಸಿ ಮಡದಿಯ ಮೆಚ್ಚುಗೆಯನ್ನೂ ಗಳಿಸಿಕೊಂಡಿದ್ದಾರೆ.

ಕೊರೊನಾ ನಂತರ ಕನ್ನಡ ಪ್ರೇಕ್ಷಕ ಸಿನಿಮಾದಿಂದ ನಿರೀಕ್ಷಿಸುವ ಸಂಗತಿಗಳು ಬದಲಾಗುತ್ತವೆಯೇ ಎಂದು ಕೇಳಿದರೆ ಅನುಮಾನದಿಂದಲೇ ಉತ್ತರಿಸುತ್ತಾರೆ ಅವರು.

'ಮುಂದಿನ ವರ್ಷದಿಂದ ಯಾವ ರೀತಿ ಸ್ಕ್ರಿಪ್ಟ್ ತಗೋಬೇಕು ಎಂಬ ಗೊಂದಲ ನನಗೂ ಇದೆ. ಯಾಕೆಂದರೆ ಪ್ರೇಕ್ಷಕರ ಅಭಿರುಚಿ ಹೇಗೆ ಬದಲಾಗಿವೆ ಎಂದು ನಮಗಿನ್ನೂ ಗೊತ್ತಿಲ್ಲ. ಇಷ್ಟು ದಿನ ಮಲ್ಟಿಪ್ಲೆಕ್ಸ್ ಸಿನಿಮಾ, ಸಿಂಗಲ್ ಸ್ಕ್ರೀನ್ ಸಿನಿಮಾ ಎಂಬ ನಿಚ್ಚಳ ಗೆರೆಗಳಿದ್ದವು. ಆದರೆ ಈಗ ಸಿಂಗಲ್ ಸ್ಕ್ರೀನ್‌ನ ಪ್ರೇಕ್ಷಕನೂ ಸಾಕಷ್ಟು ಬದಲಾಗಿದ್ದಾನೆ. ಅಪ್‌ಡೇಟ್ ಆಗಿದ್ದಾನೆ. ಹಾಗಾಗಿ ಮುಂದಿನ ವರ್ಷ ಯಾವ ಬಗೆಯ ಸಿನಿಮಾಗಳು ಮುಖ್ಯವಾಹಿನಿಯಲ್ಲಿ ಗೆಲ್ಲುತ್ತವೆ ಎಂದು ಊಹಿಸುವುದು ತುಸು ಕಷ್ಟವೇ' ಎನ್ನುವ ರಿಷಿಗೆ ಈ ಎಲ್ಲವೂ ರಾತ್ರಿ ಬೆಳಗಾಗುವುದರೊಳಗೆ ಗುರ್ತು ಸಿಗದ ಹಾಗೆ ಬದಲಾಗಿಬಿಡುತ್ತದೆ ಎಂಬ ಭ್ರಮೆಯೂ ಇಲ್ಲ.

'ತುಂಬ ದೊಡ್ಡ ಕ್ರಾಂತಿಯ ರೀತಿಯ ಬದಲಾವಣೆಯೇನೂ ಆಗುತ್ತದೆ ಎಂದು ನನಗನಿಸುವುದಿಲ್ಲ. ಆದರೆ ಒಂದಿಷ್ಟು ಬದಲಾವಣೆ ಆಗುವುದಂತೂ ಖಂಡಿತ. ಇಷ್ಟು ದಿನ ಶೇ 25 ಪ್ರಯೋಗಾತ್ಮಕ, ಕಥೆಯನ್ನೇ ನೆಚ್ಚಿದ ಸಿನಿಮಾಗಳು ಬರುತ್ತಿದ್ದವು. ಉಳಿದ ಸಿನಿಮಾಗಳು ಶೇ 75ರಷ್ಟಿದ್ದವು. ಆದರೆ ಅದು ಇನ್ನು ಮೇಲೆ ಫಿಫ್ಟಿ ಫಿಫ್ಟಿ ಆಗಬಹುದು' ಎಂಬುದು ಅವರ ಊಹೆ.

'ಚಿತ್ರಮಂದಿರಗಳು ತೆರೆದ ಹತ್ತು ತಿಂಗಳಷ್ಟೊತ್ತಿಗೆ ಈ ಎಲ್ಲ ಪ್ರಶ್ನೆಗಳಿಗೂ ಸ್ಪಷ್ಟ ಉತ್ತರ ಸಿಗಬಹುದು' ಎಂದೂ ಅವರು ಹೇಳುತ್ತಾರೆ.

ನವೆಂಬರ್‌ನಿಂದ ಚಿತ್ರೀಕರಣಕ್ಕೆ ತೆರಳಲಿರುವ ರಿಷಿ, ಸದ್ಯಕ್ಕೆ ಮನೆಮಂದಿಯೆಲ್ಲ ಕೂತು ನೋಡಿ ಎಂಜಾಯ್ ಮಾಡಬಲ್ಲ ಕಥೆಗಳನ್ನೇ ಎಚ್ಚರಿಕೆಯಿಂದ ಆಯ್ದುಕೊಳ್ಳುತ್ತಿದ್ದಾರಂತೆ. 'ಆದರೆ ಒಂದು ಒಳ್ಳೆಯ ಕಥೆ ಇರುವ, ಚಿಕ್ಕ ಪ್ರೇಕ್ಷಕವರ್ಗಕ್ಕಷ್ಟೇ ತಲುಪಬಲ್ಲ ಸಿನಿಮಾಗಳಲ್ಲಿಯೂ ನಟಿಸಲು ನಾನು ಸಿದ್ಧ' ಎಂದೂ ಅವರು ಹೇಳುತ್ತಾರೆ.

ಒಟ್ಟಾರೆ ಪ್ರಯೋಗಗಳ ಮೂಲಕ ಗುರ್ತಿಸಿಕೊಳ್ಳಬೇಕು. ಒಂದೇ ಛಾಯೆಗೆ ಅಂಟಿಕೊಳ್ಳಬಾರದು ಎಂಬುದು ಅವರ ಸೂತ್ರ. ಆ ಸೂತ್ರಕ್ಕೆ ಅನುಗುಣವಾಗಿ ಅವರಿಗೆ ಅವಕಾಶಗಳೂ ಸಿಗುತ್ತಿರುವುದು ಅವರ ಆತ್ಮವಿಶ್ವಾಸವನ್ನು ವೃದ್ಧಿಸಿದೆ. ■



# ಇವ ಈ ಕಾಲದ 'ಪಂಪ'

ಚಾರಿತ್ರಿಕ ವ್ಯಕ್ತಿಗಳ ಬಳಕೆ – ದುರ್ಬಳಕೆ ಮಾಡಿಕೊಳ್ಳುವುದು ಚಂದನವನದ ಹಳೆಯ ಚಾಳಿಗಳಲ್ಲೊಂದು. ಆಗೊಮ್ಮೆ ಈಗೊಮ್ಮೆ ಹೀಗೆ ಚಾರಿತ್ರಿಕ ವ್ಯಕ್ತಿಗಳ ಹೆಸರು ತೆಗೆದುಕೊಂಡೂ ಅವರಿಗೆ ನ್ಯಾಯ ಸಲ್ಲಿಸುವ ಪ್ರಾಮಾಣಿಕ ಪ್ರಯತ್ನಗಳೂ ನಡೆದಿವೆ.

ನ್ಯಾಯವೋ ಅನ್ಯಾಯವೋ ಇಂಥದೇ ಇನ್ನೊಂದು ಸಿನಿಮಾವಂತೂ ಕನ್ನಡದಲ್ಲಿ ತಯಾರಾಗಿದೆ. ಈ ಚಿತ್ರದ ಹೆಸರು 'ಪಂಪ'. ಅಂದಹಾಗೆ ಇದಕ್ಕೆ ಆ್ಯಕ್ಷನ್ ಕಟ್ ಹೇಳುತ್ತಿರುವುದು ಎಸ್. ಮಹೇಂದರ್. ಅಷ್ಟೇ ಅಲ್ಲ, ನಾದಬ್ರಹ್ಮ ಹಂಸಲೇಖ ಸಂಗೀತ ನಿರ್ದೇಶನ ಮಾಡುತ್ತಿದ್ದಾರೆ. ಅಂದಮೇಲೆ ಇದು ಆದಿಕವಿ ಪಂಪನ ಜೀವನಕಥನ ಇರಬೇಕು ಎಂದು ಊಹಿಸಬೇಡಿ. ಖಂಡಿತ ಅಲ್ಲ, ಇಲ್ಲಿನ ಪಂಪನ ಪೂರ್ತಿ ಹೆಸರು, ಪಂಚಳ್ಳಿ ಪರಶಿವಮೂರ್ತಿ. ವೃತ್ತಿಯಲ್ಲಿ ಕನ್ನಡ ಪ್ರಾಧ್ಯಾಪಕ. ಕಥೆ, ಕವಿತೆ ರಚಿಸುವುದು ಅಭ್ಯಾಸ. ಹಾಗಾಗಿ ಪಂಪನಿಗೂ ಇವನಿಗೂ ಒಂದು ಸಾರಸ್ವತ ಸಂಬಂಧವಂತೂ ಜೋಡಿಸಿಕೊಳ್ಳಬಹುದು.

ಈ ಸಿನಿಮಾದಲ್ಲಿ ಪಂಪ ಕೊಲೆಯಾಗುತ್ತಾನಂತೆ. ಆದಿಕವಿಯ ಹೆಸರಿನ ಈ ಕಾಲದ ಸಾಹಿತಿಯ ಕೊಲೆಯ ಸುತ್ತ ಬಿಚ್ಚಿಕೊಳ್ಳುತ್ತ ಹೋಗುವ ನಿಗೂಢ ಲೋಕ ಈ ಸಿನಿಮಾದ ಕಥೆ. ಪಂಪನ ಪಾತ್ರದಲ್ಲಿ ಹಿರಿಯ ರಂಗಭೂಮಿ ಕಲಾವಿದ ಕೀರ್ತಿಭಾನು ನಟಿಸಿದ್ದಾರೆ. ಸಂಗೀತಾ, ರಾಘವ ನಾಯಕ್, ಅರವಿಂದ್, ಆದಿತ್ಯ ಶೆಟ್ಟಿ, ಭಾವನಾ ಭಟ್, ರೇಣುಕಾ, ರವಿ ಭಟ್, ಶ್ರೀನಿವಾಸ ಪ್ರಭು ಮುಂತಾದವರು ತಾರಾಗಣದಲ್ಲಿದ್ದಾರೆ. ಈಗಾಗಲೇ 'ಪಂಪ' ಸಿದ್ಧವಾಗಿದೆ. ಚಿತ್ರಮಂದಿರಗಳು ಕಾರ್ಯಾರಂಭಗೊಂಡ ನಂತರ ಬಿಡುಗಡೆ ಮಾಡುವ ನಿರ್ಧಾರದಲ್ಲಿ ಚಿತ್ರತಂಡವಿದೆ. ■

## ಪವನ್ -ಅಪೇಕ್ಷಾ ರಮ್ಯ ಚೈತ್ರಕಾಲ

**The love tripled now** – ಹೀಗೆಂದು ಸಂಭ್ರಮದ ಉದ್ಗಾರ ಹೊರಡಿಸಿದ್ದಾರೆ ನಟಿ ಅಪೇಕ್ಷಾ ಪುರೋಹಿತ್. 'ಕಾಫಿತೋಟ' ಸಿನಿಮಾ ಮತ್ತು ಹಲವು ಕಿರುತೆರೆ ಧಾರಾವಾಹಿಗಳಲ್ಲಿ ನಟಿಸಿದ್ದ ಅಪೇಕ್ಷಾ ಅಮ್ಮನಾಗುವ ಪುಳಕದಲ್ಲಿದ್ದಾರೆ. ಅವರ ಪತಿ, ನಿರ್ದೇಶಕ ಪವನ್ ವಡೆಯರ್ ಅಂತೂ ಈ ಖುಷಿಯಲ್ಲಿ ಮೂಕವಿಸ್ಮಿತರಾಗಿಬಿಟ್ಟಿದ್ದಾರೆ. ಇದೇ ಖುಷಿಯಲ್ಲಿ ಅವರು ಪ್ರೆಗ್ನೆಂಟ್ ಫೋಟೊಶೂಟ್‌ನಲ್ಲೂ ಪಾಲ್ಗೊಂಡಿದ್ದಾರೆ.

'ಸದಾ ವಟ ವಟ ಮಾತನಾಡುವ ನಾನು ಮೌನಿಯಾದ ಕ್ಷಣಗಳು. ಹೌದು ನಮ್ಮ ಜೀವನದ ಅತ್ಯಂತ ಸುಂದರ ದಿನಗಳಿಗಾಗಿ ಹಾತೊರೆಯುತ್ತಿದ್ದೇವೆ' ಎಂದು ಟ್ವಿಟರ್ ಖಾತೆಯಲ್ಲಿ ಬರೆದುಕೊಂಡಿರುವ ಪವನ್, ಪ್ರೆಗ್ನೆಂಟ್ ಫೋಟೊಶೂಟ್‌ನ ಸುಂದರ ಚಿತ್ರಗಳನ್ನೂ ಹಂಚಿಕೊಂಡಿದ್ದಾರೆ.

ಈಗ ಆಗುತ್ತಿರುವ ಖುಷಿಯನ್ನು ಅವರಿಗೆ ಹೇಳಿಕೊಳ್ಳಲಿಕ್ಕೇ ಸಾಧ್ಯವಾಗುತ್ತಿಲ್ಲವಂತೆ. ಮಾತಿನಲ್ಲಿ ಹೇಳಲಾರದ್ದನ್ನು ಹಾಡಿನಲ್ಲಿ ಹೊಮ್ಮಿಸುವ ಆಲೋಚನೆಯೂ ಅವರ ಮನಸನ್ನು ಹೊಕ್ಕಿದೆ. ಸದ್ಯವೇ ಪವನ್ ತಂದೆಯಾಗುತ್ತಿರುವ ಸಡಗರ ಹಾಡಾಗಿ ಹೊಮ್ಮಲಿದೆ. ■



ಪವನ್ ವಡೆಯರ್ ಮತ್ತು ಅಪೇಕ್ಷಾ ಪುರೋಹಿತ್